ಅ)

1) ಬೆಂಗಳೂರು (ಗ್ರಾಮಾಂತರ)
2) ಶಿವಮೊಗ್ಗ
3) ಮೈಸೂರು
4) ಮಂಡ್ಯ
5) ದಕ್ಷಿಣ ಕನ್ನಡ
6) ಬೆಳಗಾಂ
7) ಗುಲ್ಬರ್ಗಾ
8) ಬೀದರ್
9) ರಾಯಚೂರು
10) ಬಳ್ಳಾರಿ
11) ತುಮಕೂರು, ಹಾಗೂ
12) ಹಾಸನ.

ಶ್ರೀ ಎಂ. ತಮ್ಮಣ್ಣ (ಶ್ರೀ ಎಂ.ಎಸ್. ಆತ್ಮಾನಂದ ಅವರ ಪರವಾಗಿ): ಸನ್ಮಾನ್ಯ ಸಭಾಧ್ಯಕ್ಷರೆ, ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆ ತೆಗೆದುಕೊಂಡಿದ್ದು ಅದರಲ್ಲಿ ಮಂಡ್ಯ ಜಿಲ್ಲೆಯೂ ಒಂದಾಗಿದೆ. ಈ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಇದಕ್ಕೆ ಆಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳು ಪ್ರಾರಂಭವಾಗಿವೆ ಎಂಬುದನ್ನು ಕೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ಪ್ರಶ್ನೆಯನ್ನು ಇನ್ನೊಮ್ಮೆ ಕೇಳಿ. ಅವರಿಗೆ ಸರಿಯಾಗಿ ಕೇಳಲಿಲ್ಲ.

ಶ್ರೀ ಎಂ. ತಮ್ಮಣ್ಣ: ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಟ್ಟು 12 ಜಿಲ್ಲೆಗಳು ವಿಶ್ವಬ್ಯಾಂಕಿನ ಯೋಜನೆಗೆ ಒಳಪಟ್ಟಿವೆ. ಅದರಲ್ಲಿ ನಮ್ಮ ಮಂಡ್ಯ ಜಿಲ್ಲೆಯೂ ಒಂದು. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಈ ಯೋಜನೆಗೆ ಆಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಜಿಲ್ಲಾವಾರು ಮಾಹಿತಿ ನನ್ನ ಕಡೆ ಇಲ್ಲ, ವರ್ಲ್ಡ್ ಬ್ಯಾಂಕ್ ಯೋಜನೆಯಡಿಯಲ್ಲಿ ಎಷ್ಟು ಸೇರಿಸಿದ್ದೇವೆ ಆ ಮಾಹಿತಿ ಕೊಟ್ಟಿದ್ದೇನೆ. ಆದರೆ ಯಾವ ಯಾವ ಹಳ್ಳಿಗಳು ಅನ್ವಯಿಸುತ್ತವೆ ಎಂಬುದು ತಮಗೇ ಗೊತ್ತಿರಬೇಕು. ಈ ತಕ್ಷಣ ಆ ಮಾಹಿತಿ ನನ್ನ ಕಡೆ ಇಲ್ಲ, ಬೇಕಾದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿದೆ, ಯಾವ ಯಾವ ಕೆಲಸ ಪ್ರಾರಂಭವಾಗುತ್ತದೆ, ಎಷ್ಟು ಖರ್ಚಾಗುತ್ತದೆ ಈ ವಿವರಗಳು ನಮ್ಮ ಕಡೆ ಇದೆ. ಸದ್ಯಕ್ಕೆ ಇಲ್ಲಿ ನಮ್ಮ ಕಡೆ ಇಲ್ಲ, ತಮಗೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ತಮ್ಮಣ್ಣ: ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳನ್ನು ವಿಶ್ವ ಬ್ಯಾಂಕಿನ ಯೋಜನೆಗೆ ಆಳವಡಿಸಿದ್ದಾರೆ? ಈಗಾಗಲೇ ಎಷ್ಟು ಕಾರ್ಯಕ್ರಮ ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಡೀಟೈಲ್ಸ್ ಇದ್ದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿವೆ, ಎಷ್ಟೆಷ್ಟು ಖರ್ಚಾಗುತ್ತದೆ ಎಂಬ ವಿವರಗಳನ್ನು ಕಳುಹಿಸಿಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಲ್ಲದ ಬಾಗೇವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ

477 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ತೊಂದರೆ ಹೋಗಲಾಡಿಸಲು ಘಟಪ್ರಭಾ ನದಿಯಿಂದ ಕೊಳವೆ ಮೂಲಕ ನೀರು ಒದಗಿಸುವ ಯೋಜನೆ ಸರ್ಕಾರದಲ್ಲಿ ಇದೆಯೇ?

ಇ) ಇದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ) ಇಲ್ಲ.

ಆದರೆ, ಈ ಗ್ರಾಮವನ್ನು ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಲ್ಲಿ ಸೇರಿಸಲಾಗಿದೆ.

ಇ) 1996-97

ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

628 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಂಚಾಯತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ನಿಗದಿಪಡಿಸಿ ನಂತರ ಕೆಲವು ಜಿಲ್ಲೆಗಳಲ್ಲಿ ಅವುಗಳನ್ನು ಮುಂದೂಡಲಾದ ಸಂಗತಿ ನಿಜವೇ?

ಆ) ಹಾಕಿದ್ದಲ್ಲಿ ಅವುಗಳನ್ನು ಮುಂದೂಡಲು ಕಾರಣಗಳೇನು?

ಇ) ಜಿಲ್ಲಾಧಿಕಾರಿಗಳು ಆ ಪಂಚಾಯತಿ ಚುನಾವಣೆಗಳನ್ನು ಮುಂದೂಡಲಾದ ಕ್ಷೇತ್ರಗಳಲ್ಲಿ ಯಾವ ಯಾವ ತಪ್ಪನ್ನು ಮಾಡಿದ್ದರು?

ಈ) ಉಳಿದ ಜಿಲ್ಲೆಗಳಲ್ಲಿಯೂ ಸಹ ಇದೇ ಪ್ರಕಾರವಾಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆರಿಸಬೇಕಾದ ನಿಯಮಗಳನ್ನು ಅನುಸರಿಸಿದ್ದರೂ ಕೂಡ ಆ ಕ್ಷೇತ್ರಗಳಲ್ಲಿ ಚುನಾವಣೆಗಳನ್ನು ಏಕೆ ಮುಂದೂಡಲಾಗಿರುವುದು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು.

ಆ) ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯನ್ನು ಸರ್ಕಾರವು ನೀಡಿದ ಮಾರ್ಗದರ್ಶನದ ಆಜ್ಞೆಯ ಸಂಖ್ಯೆ : ಗ್ರಾಅಪ:755 ಜಿಪಸ 93 ದಿ : 2-2-94ನ್ನು ಅನುಸರಿಸದೇ ಕೆಲವು ಜಿಲ್ಲಾಧಿಕಾರಿಗಳು ಹುದ್ದೆಗಳನ್ನು ಮೀಸಲಿಡಲು ಆಜ್ಞೆಗಳನ್ನು ನೀಡಿದ್ದಾರೆ ಎಂದು ಸರ್ಕಾರಕ್ಕೆ ಮನವಿಗಳು ಬಂದಿರುತ್ತವೆ. ಅಂತಹ ಜಿಲ್ಲಾಧಿಕಾರಿಗಳನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯ ಬಗ್ಗೆ ಸರ್ಕಾರವು ನೀಡಿದ ಮಾರ್ಗದರ್ಶನದ (ಗೈಡ್ಲೈನ್ಸ್) ಅನ್ವಯ ಅವರ ಆಜ್ಞೆಗಳನ್ನು ಪರಿಶೀಲಿಸಿ ನಂತರ ಚುನಾವಣೆಗಳನ್ನು ನಡೆಸುವಂತೆ ಸೂಚಿಸಲಾಗಿತ್ತು.

ಡಂಕಲ್ ಪ್ರಸ್ತಾವ ಹಾಗೂ ಗ್ಯಾಟ್ ಒಪ್ಪಂದ

558 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?